# ಪುಸ್ತಕಗಳೇ ನಮಗೆ ಆದರ್ಶ

■ ತಯಬಅಲಿ ಅ. ಹೊಂಬಳ


ಚಿತ್ರ: ಶಶಿಧರ ಹಳೇಮನಿ

ಒಂದು ಶಾಲೆಯಲ್ಲಿ ಸೋಮು ತುಂಬಾ ಜಾಣ ವಿದ್ಯಾರ್ಥಿಯಾಗಿದ್ದನು, ಅವನ ಜೀವನದಲ್ಲಿ ಏನನ್ನಾದರೂ ಸಾಧಿಸಬೇಕು, ನನ್ನಿಂದ ನನ್ನ ತಂದೆ ತಾಯಿ, ಗುರುಗಳಿಗೆ ಅಲ್ಲದೆ ಈ ಊರಿಗೆ ಒಳ್ಳೆಯ ಹೆಸರು ತರಬೇಕು ಅಂತಹ ಕೆಲಸ ಮಾಡಬೇಕು ಎಂದು ಯಾವಾಗಲೂ ಇಂತಹ ಕನಸುಗಳನ್ನೇ ಕಾಣುತ್ತಿದ್ದನು, ಆದರೆ ಸೋಮುನ ತಂದೆ ತುಂಬಾ ಬಡವ ಇವತ್ತು ದುಡಿದರೆ ಮಾತ್ರ ಮನೆ ನಡೆಯುತ್ತಿತ್ತು, ಇಂತಹ ಕಷ್ಟದ ದಿನಗಳು ಸೋಮುನಿಗೆ.

ಒಂದು ದಿನ ಒಂದು ಒಳ್ಳೆಯ ಪುಸ್ತಕ ಸಿಕ್ಕಿತು, ಅದು ಗಾಂಧೀಜಿಯ ಬಗ್ಗೆ ಇತ್ತು, ಸೋಮು ಆ ಪುಸ್ತಕವನ್ನು ಓದಿದ ಮತ್ತೊಮ್ಮೆ ಓದಿದ, ಹೀಗೆ ಸಮಯ ಸಿಕ್ಕಾಗಲೆಲ್ಲಾ ಓದುತ್ತಿದ್ದ ಆ ಒಂದು ಪುಸ್ತಕ ಮಾತ್ರ, ಒಂದು ಸಲ ಸೋಮುನ ಗುರುಗಳಾದ ಕಲ್ಲಪ್ಪ ಮೇಸ್ಟ್ರು ಯಾವಾಗಲೂ ಈ ಒಂದು ಪುಸ್ತಕವನ್ನು ಮಾತ್ರ ಓದುತ್ತಿದ್ದಾನೆ ಈ ಸೋಮು..! ಎಂದು ಅವನಿಗೆ ಹತ್ತಿರ ಕರೆದು "ಈ ಪುಸ್ತಕ ನಿನಗೆ ಬಹಳ ಇಷ್ಟ ಆಯಿತಾ.. ಎಂದು ಕೇಳಿದರು.

ಹೌದು ಗುರುಗಳೇ ಗಾಂಧೀಜಿಯವರ ಬಗ್ಗೆ ತುಂಬಾ ವಿಷಯಗಳು ಈ ಪುಸ್ತಕದಲ್ಲಿ ಇವೆ, ಮತ್ತೆ ಮತ್ತೆ ಓದಬೇಕೆನಿಸುತ್ತದೆ ಎಂದ. ಆಗ ಗುರುಗಳಾದ ಕಲ್ಲಪ್ಪ ಮೇಷ್ಟ್ರು ಆಯಿತು, ಒಂದು ಪುಸ್ತಕ ಒಂದು ಎರಡು ಮೂರು ಜಾರಿ ಓದಿದ ಮೇಲೆ ಅದರಲ್ಲಿರುವ ವಿಷಯಗಳು ನಮಗೆ ತಿಳಿದು ಬಿಡುತ್ತವೆ, ಆಗ ನಾವು ಮತ್ತೆ ಬೇರೆ ಬೇರೆ ಪುಸ್ತಕಗಳನ್ನು ಓದಬೇಕು ಅಂದಾಗ ಮಾತ್ರ ಇನ್ನು ಹೆಚ್ಚಿನ ವಿಷಯಗಳು ಸಿಗುತ್ತವೆ, ಮತ್ತು ನಮಗೆ ಹೆಚ್ಚಿನ ಜ್ಞಾನ ಸಿಗುತ್ತದೆ ಎಂದರು.

ಹೌದಾ ಗುರುಗಳೇ..! ಆದರೆ ನನ್ನ ಹತ್ತಿರ ಬೇರೆ ಬೇರೆ ಪುಸ್ತಕಗಳು ಇಲ್ಲ, ಎಂದ ಸೋಮು.

ಪುಸ್ತಕದ ಅಂಗಡಿಯಲ್ಲಿ, ಪುಸ್ತಕ ಪ್ರದರ್ಶನಗಳಲ್ಲಿ ದೊಡ್ಡ ದೊಡ್ಡ ಹಿರಿಯ ಕಿರಿಯ ಸಾಹಿತಿಗಳ ಪುಸ್ತಕಗಳು ಸಿಗುತ್ತವೆ ಎಂದರು.

ಅಲ್ಲಿ ನಾನು ತೆಗೆದುಕೊಳ್ಳಲಿಕ್ಕೆ ಆಗುವುದಿಲ್ಲ ಗುರುಗಳೇ.. ಎಂದ ಸೋಮು.

ಯಾಕೆ..? ಎಂದರು ಕಲ್ಲಪ್ಪ ಮೇಷ್ಟ್ರು.

ಯಾಕೆಂದರೆ ನಾವು ಬಡವರು ನಮಗೆ ಅಷ್ಟು ಹಣ ಕೊಟ್ಟು ಪುಸ್ತಕ ಖರೀದಿ ಮಾಡುವಷ್ಟು ಅನುಕೂಲ ಇಲ್ಲ ಗುರುಗಳೇ.. ಎಂದ ಸೋಮು.

ನಾನು ಸಣ್ಣವನಿದ್ದಾಗ ಒಂದು ಪೆನ್ಸಿಲ್ ಖರೀದಿ ಮಾಡುವಷ್ಟು ಹಣ ಇರಲಿಲ್ಲ ನಮ್ಮ ತಂದೆಯವರ ಹತ್ತಿರ. ನಮ್ಮಂತಹವರಿಗಾಗಿಯೇ ಸರಕಾರಿಸಾರ್ವಜನಿಕ ಗ್ರಂಥಾಲಯಗಳು ಇವೆ, ಅಲ್ಲಿ ದಿನ ಪತ್ರಿಕೆ ವಾರದ ಪತ್ರಿಕೆ, ಮಾಸ ಪತ್ರಿಕೆ ಮತ್ತು ಹಿರಿಯ ಕಿರಿಯ ಸಾಹಿತಿ ಕವಿಗಳ ದೊಡ್ಡ ದೊಡ್ಡ ಪುಸ್ತಕಗಳು, ಮಕ್ಕಳ ಕಥೆ ಪುಸ್ತಕಗಳು, ರಾಮಾಯಣ, ಮಹಾಭಾರತದಂತಹ ಒಳ್ಳೆಯ ಪುಸ್ತಕಗಳು ಸಿಗುತ್ತವೆ, ಶಾಲೆ ಬಿಟ್ಟ ಬಳಿಕ ಮನೆ ಪಾಠ ಆದ ಬಳಿಕ ಗ್ರಂಥಾಲಯಕ್ಕೆ ಹೋಗಿ ನೋಡಬಹುದು, ಓದಬಹುದು.. ಎಂದು ಹೇಳಿದರು ಕಲ್ಲಪ್ಪ ಮೇಷ್ಟ್ರು.

ಹೌದು ಗುರುಗಳೇ.. ನಾನು ದಿನಾಲು ಹೋಗುತ್ತೇನೆ, ಒಳ್ಳೆಯ ಪುಸ್ತಕಗಳನ್ನು ಓದುತ್ತೇನೆ, ಗಾಂಧೀಜಿಯವರ ಬೇರೆ ಬೇರೆ ಪುಸ್ತಕಗಳನ್ನು ಓದಿ ತಿಳಿದುಕೊಳ್ಳುತ್ತೇನೆ ಎಂದನು ಸೋಮು. ಮುಂದೆ ಒಂದು ದಿನ ಸೋಮು ದೊಡ್ಡವನಾದ ಕನ್ನಡದಲ್ಲಿ ಮಹಾನ್ ವಿದ್ವಾಂಸನಾದ ನಾಡಿಗೆ ಹೆತ್ತ ತಂದೆ ತಾಯಿಗಳಿಗೆ ಊರಿಗೆ ಹೆಸರು ತಂದುಕೊಟ್ಟ.

ಇಲ್ಲಿ ಸಾಧನೆಯ ಜೀವನ ಹೀಗೆಯೇ ಮುಂದುವರೆಯುತ್ತದೆ, ಪುಸ್ತಕವನ್ನು ಓದುವ ಗುಣ ನಮಗಿರಬೇಕು, ಹಲವು ಒಳ್ಳೆಯ ನೀತಿಯುಕ್ತ ಪುಸ್ತಕಗಳೇ ನಮ್ಮ ಗುರಿಯಾಗಬೇಕು, ನಮ್ಮ ಗುರಿಯಲ್ಲೂ ಶ್ರದ್ಧೆ, ಶ್ರಮ, ಮನಸ್ಸು ಮಾಡಿದರೆ ನಮಗೆ ಯಶಸ್ಸು ಖಂಡಿತ ಸಿಗುತ್ತದೆ. ■